# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437

## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:266/2022**

**ವೇದಿಕೆಯ ಸದಸ್ಯರು:**

ಶ್ರೀಮತಿ **ಶರಣಮ್ಮ ಎಸ್ ಜಂಗಿನ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವಲಯ ಕಚೇರಿ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.
ಶ್ರೀ **ರೇವಣಸಿದ್ದಪ್ಪ ಗವಣ್ಣವರ,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.
ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಶರಶ್ಚಂದ್ರ ಎಂ ಶೆಟ್ಟಿ,
[R.R. No :64176C]
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ,
ಕೆಶ್ವಾಪೂರ ಹುಬ್ಬಳ್ಳಿ-580023

.............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪ ವಿಭಾಗ-2,
ಹೆಸ್ಕಾಂ, ಹುಬ್ಬಳ್ಳಿ.

.................**ಪ್ರತಿವಾದಿಗಳು.**

**ಪೀಠಿಕೆ:**

1. ಸ್ಥಾವರ ಸಂಖ್ಯೆ: 64176C ಶ್ರೀ ಶರಶ್ಚಂದ್ರ ಎಂ ಶೆಟ್ಟಿ, ಸ್ಟೇಷನ್ ರೋಡ, ಹುಬ್ಬಳ್ಳಿ ಇವರ ಸ್ಥಾವರ 2 ಕಿ.ವ್ಯಾ. ವಿದ್ಯುತ್ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ಮಂಜೂರಾತಿಯಾಗಿರುತ್ತದೆ. ಸದರಿ ಸ್ಥಾವರಕ್ಕೆ 2012 ನೇ ಸಾಲಿನಿಂದ ಪ್ರತಿ ಮಾಹೆಯ ಬಿಲ್ಲಿನಲ್ಲಿ ರೂ. 250/-ರೂಗಳನ್ನು ಬಿ.ಎಂ.ಡಿ. ದಂಡವನ್ನು ಹೆಚ್ಚುವರಿ ಬಳಕೆ ಎಂದು ಆಕರಿಸಿದ್ದು, ಸದರಿ ಮೊತ್ತವನ್ನು ಗ್ರಾಹಕರಿಂದ ಪಾವತಿಸಿಕೊಂಡಿದ್ದಿರುತ್ತದೆ ಆದರೆ ಸದರಿ ಸ್ಥಾವರದ ಗ್ರಾಹಕರ ಸ್ಥಾವರದ ಇತಿಹಾಸವನ್ನು ಪರಿಶೀಲಿಸಲಾಗಿ, ಮಾಪಕ ಓದುಗರು ಸದರಿ ಸ್ಥಾವರದ ಮಾಪಕ ಓದುವಿಕೆಯಲ್ಲಿ ಸ್ಥಾವರವು Idle ಎಂದು ಬಹಳಷ್ಟು ವರ್ಷಗಳು ನಮೂಧಿಸಿದ್ದು, ವಿದ್ಯುತ್ ಬಳಕೆ **'0'** ಇರುತ್ತದೆ. ಆದ್ದರಿಂದ ಸದರಿ ಗ್ರಾಹಕರಿಗೆ ನಿಯಮಬಾಹಿರವಾಗಿ ಆಕರಿಸಿರುವ ಬಿ.ಎಂ.ದಂಡದ ಮೊತ್ತವನ್ನು ಹಿಂಪಾವತಿಸುವಂತೆ ಹಾಗೂ ಸದರಿ ಬಿ.ಎಂ. ದಂಡ ಎಂದು ಪಾವತಿಸಿಕೊಂಡ ಮೊತ್ತವನ್ನು KERC Conditions of Supply Clause 29-08 and Sub Section 62(6) of the Electricity Act from the date of payment and up to the date of credit ರ ಪ್ರಕಾರ ಬ್ಯಾಂಕ್ ಬಡ್ಡಿದರದೊಂದಿಗೆ ಹಿಂಪಾವತಿಸಿಕೊಡವಂತೆ ಕೋರಿ, ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ದಿನಾಂಕ:16-09-2022 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ 'ಎ' ನಮೂನೆಯೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.
2. ಶ್ರೀ ಶರಶ್ಚಂದ್ರ ಎಂ ಶೆಟ್ಟಿ, ಸ್ಟೇಷನ್ ರೋಡ, ಹುಬ್ಬಳ್ಳಿ ಇವರ ಸ್ಥಾವರ 2 ಕಿ.ವ್ಯಾ. ವಿದ್ಯುತ್ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:10-02-1987 ರಂದು ವಿದ್ಯುತ್ ಸಂಪರ್ಕಿತಗೊಂಡಿದ್ದು, ಸದರಿ ಸ್ಥಾವರಕ್ಕೆ ಅಕ್ಟೋಬರ್-2018 ರಲ್ಲಿ ಮಾಪಕ ತಪಾಸಣೆ ಮಾಡಿ, ಮಂಜೂರಾತಿ ಭಾರಕ್ಕಿಂತ 3 ಕಿ.ವ್ಯಾ ಹೆಚ್ಚಿಗೆ ಲೋಡನ್ನು ಬಳಸುತ್ತಿರುವುದಕ್ಕೆ ಪ್ರತಿ ತಿಂಗಳು ಬಿ.ಎಂ.ಡಿ.

ದಂಡವನ್ನು ಆಕರಿಸಿದ್ದಿರುತ್ತದೆ. ಸದರಿ ಸ್ಥಾವರಕ್ಕೆ ಹೆಚ್ಚುವರಿ ಲೋಡನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಗ್ರಾಹಕರು ಸಲ್ಲಿಸಿರುವುದಿಲ್ಲ. ಹಾಗೂ ಪ್ರತಿ ತಿಂಗಳು ಬಿಲ್ಲಿನಲ್ಲಿ ಬಿ.ಎಂ.ಡಿ. ದಂಡ ಬಂದರು ಸಹಿತ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇಲ್ಲಿಯವರೆಗೂ ಸದರಿ ದಂಡದ ಮೊತ್ತವನ್ನು ಪ್ರತಿ ತಿಂಗಳು ಗ್ರಾಹಕರು ಪಾವತಿಸುತ್ತಾ ಬಂದಿರುತ್ತಾರೆ. ಆದ್ದರಿಂದ ಸದರಿ ಹೆಚ್ಚುವರಿ ಲೋಡನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಸಲ್ಲಿಸದೇ ಇರುವುದರಿಂದ ಈಗಾಗಲೇ ಪಾವತಿಸಿದ ಬಿ.ಎಂ.ಡಿ. ದಂಡದ ಮೊತ್ತವನ್ನು ಹಿಂಪಾವತಿಸುವ ಪ್ರಮಯವೇ ಬರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2 ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ: 04-11-2022 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

ಗ್ರಾಹಕರ ಪರವಾಗಿ
ಶ್ರೀ ತುಷಾರ ಬದ್ದಿ

ನಿಗಮದ ಪರವಾಗಿ
ಶ್ರೀ ಡಿ ಎಫ್ ಲಂಗೋಟಿ
ಸ.ಕಾ.ನಿ.ಇಂ(ವಿ)
ಕಾ ಮತು ಪಾ ಶಹರ ಉಪ ವಿಭಾಗ-2, ಹುಬ್ಬಳ್ಳಿ.

**ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ, ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:**

## MEMO OF COMPLAINT

**By Shri S M Shetty by his Authorised Representative Tushar M Baddi R/o Hubballi**

***

**BRIEF FACTS**

On behalf of Shri S m Shetty it is most respectfully submitted that, he has obtained a electricity supply bearing RR No. 64176C to his commercial shop at Station Road, Hubballi to the tune of 2.0KW.

1. The installation bearing RR No. 64176C is serviced in the name of Shri Sharashchandra M Shetty of Hubballi with a sanctioned load of 2KW under commercial tariff.
2. It is further submitted before this Authority that the installation is idle since several years and the same is noted by the Meter reader, the consumption of the meter is zero as well.
3. It is further submitted that a MD penalty of Rs 250/- is reflected every month in the regular bill alongwith fixed charges.
4. On going through the record it is learnt that the MD penalty is reflected in the bill since 2012 with a remarks of excess load.

In view of the aforesaid contentions it is hereby requested before this Authority to kindly direct the concerned licensee to refund the excess claims made in the past so as to avoid further consequences.

In view of the aforesaid paras direction is sought to:

a. Refund the excess MD Penalty charges collected so far as the case is concerned.
b. Interest in terms of clause 29.08 of KERC Conditions of Supply on the excess MD Penalty from the date of collection till the date of refund.
c. Bank Interest (SBI base rate per annum) as per section 62(6) of Electricity Act.

**ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿ ಇವರ ಲಿಖಿತ ಹೇಳಿಕೆ.**

ಶ್ರೀ.ಶರಶ್ಚಂದ್ರ.ಎಂ.ಶೆಟ್ಟಿ ಇವರ ಸ್ಥಾವರ ಸಂಖ್ಯೆ: 64176C ಗೆ ಬಿ.ಎಂ.ಡಿ ದಂಡ ಆಕರಣೆ ಮಾಡಿರುವುದಕ್ಕೆ ಗ್ರಾಹಕರ ಪರವಾಗಿ ಶ್ರೀ.ತುಷಾರ್.ಎಂ.ಬದ್ದಿ ರವರು ಮಾನ್ಯ ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಧಾರವಾಡ ಜಿಲ್ಲೆ ರವರಲ್ಲಿ ಸಲ್ಲಿಸಿದ ದೂರಿನ ಕುರಿತಾದ ಪ್ಯಾರಾ ವೈಸ್ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

| | | |
|---|---|---|
| ಸ್ಥಾವರ ಸಂಖ್ಯೆ | : | 64176C/ 5887942000 |
| ಹೆಸರು ಮತ್ತು ವಿಳಾಸ | : | ಶ್ರೀ.ಶರಶ್ಚಂದ್ರ.ಎಂ.ಶೆಟ್ಟಿ |
| ಮಂಜೂರಾದ ಭಾರ | : | 2 KW |
| ಸಂಪರ್ಕ ದಿನಾಂಕ | : | 10-02-1987 |
| ಜಕಾತಿ | : | LT3 |

1) ವಿದ್ಯುತ್ ಸ್ಥಾವರ ಸಂಖ್ಯೆ: 64176C ರ ನೋಂದಾಯಿತ ವಿದ್ಯುತ್ ಗ್ರಾಹಕರ ಹೆಸರು ಶ್ರೀ.ಶರಶ್ಚಂದ್ರ.ಎಂ.ಶೆಟ್ಟಿ ಇದ್ದು, ಎಲ್.ಟಿ-3 ಜಕಾತಿಯಲ್ಲಿ 2 KW ಭಾರಕ್ಕೆ ಮಂಜೂರಾತಿ ಹೊಂದಿರುತ್ತದೆ.
2) ಸದರಿ ಸ್ಥಾವರಕ್ಕೆ ಅಕ್ಟೋಬರ್-2018 ರಲ್ಲಿ ಮಾಪಕ ತಪಾಸಣೆ ಮಾಡಿ, ಮಂಜೂರಾತಿ ಭಾರಕ್ಕಿಂತ 3 ಕಿ.ವ್ಯಾ ಹೆಚ್ಚಿಗೆ ವಿದ್ಯುತ್ ಲೋಡ್‌ನ್ನು ಬಳಸುತ್ತಿರುವದಕ್ಕೆ ಪ್ರತಿ ತಿಂಗಳು ದಂಡವನ್ನು ವಿಧಿಸುತ್ತಾ ಬಂದಿದ್ದು ಇರುತ್ತದೆ.
3) ಸದರಿ ಹೆಚ್ಚುವರಿ ಲೋಡ್‌ನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಸಲ್ಲಿಸಿರುವುದಿಲ್ಲ ಹಾಗೂ ಪ್ರತಿ ತಿಂಗಳು ಬಿಲ್ಲಿನಲ್ಲಿ ಬಿ.ಎಂ.ಡಿ ದಂಡ ಬಂದರು ಸಹಿತ ಯಾವುದೇ ಆಕ್ಷೇಪಣೆ ಸಲ್ಲಿಸದೇ ಇಲ್ಲಿಯವರೆಗೂ ಸದರಿ ದಂಡದ ಮೊತ್ತವನ್ನು ಪ್ರತಿ ತಿಂಗಳು ಗ್ರಾಹಕರು ಪಾವತಿಸುತ್ತಾ ಬಂದಿರುತ್ತಾರೆ.
4) ಆದ್ದರಿಂದ, ಸದರಿ ಹೆಚ್ಚುವರಿ ಲೋಡ್‌ನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಸಲ್ಲಿಸದೇ ಇರುವುದರಿಂದ ಈಗಾಗಲೇ ಪಾವತಿಸಿದ ಬಿ.ಎಂ.ಡಿ ದಂಡದ ಮೊತ್ತವನ್ನು ಹಿಂಪಾವತಿಸುವ ಪ್ರಮೇಯವೇ ಬರುವುದಿಲ್ಲವೆಂದು ತಮ್ಮ ದಯಾಪರರ ಮಾಹಿತಿಗಾಗಿ ಸಲ್ಲಿಸಿದೆ.

**ಪ್ರಾರ್ಥನೆ**

**ದಯಾಪರರವರಲ್ಲಿ ಪ್ರಾರ್ಥಿಸುವುದೇನೆಂದರೆ ಸದರಿ ಗ್ರಾಹಕರು ಹೆಚ್ಚುವರಿ ಲೋಡ್‌ನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಸಲ್ಲಿಸದೇ ಇರುವುದರಿಂದ ಈಗಾಗಲೇ ಪಾವತಿಸಿದ ಬಿ.ಎಂ.ಡಿ ದಂಡದ ಮೊತ್ತವನ್ನು ಹಿಂಪಾವತಿಸುವ ಪ್ರಮೇಯವೇ ಬರುವುದಿಲ್ಲವೆಂಬ ನಮ್ಮ ಪ್ರಾರ್ಥನೆಯನ್ನು ಪುರಸ್ಕರಿಸಬೇಕೆಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ**

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಸ್ಥಾವರ ಸಂಖ್ಯೆ: 64176C ಶ್ರೀ ಶರಶ್ಚಂದ್ರ ಎಂ ಶೆಟ್ಟಿ, ಸ್ಟೇಷನ್ ರೋಡ, ಹುಬ್ಬಳ್ಳಿ ಇವರ ಸ್ಥಾವರ 2 ಕಿ.ವ್ಯಾ. ವಿದ್ಯುತ್ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ಮಂಜೂರಾತಿಯಾಗಿರುತ್ತದೆ. ಸದರಿ ಸ್ಥಾವರಕ್ಕೆ 2012 ನೇ ಸಾಲಿನಿಂದ ಪ್ರತಿ ಮಾಹೆಯ ಬಿಲ್ಲಿನಲ್ಲಿ ರೂ. 250/-ರೂಗಳನ್ನು ಬಿ.ಎಂ.ಡಿ. ದಂಡವನ್ನು ಹೆಚ್ಚುವರಿ ಬಳಕೆ ಎಂದು ಆಕರಿಸಿದ್ದು, ಸದರಿ ಮೊತ್ತವನ್ನು ಗ್ರಾಹಕರಿಂದ ಪಾವತಿಸಿಕೊಂಡಿರುವುದು ಕಂಡುಬರುತ್ತದೆ. ಸದರಿ ಸ್ಥಾವರದ ಗ್ರಾಹಕರ ಸ್ಥಾವರದ ಇತಿಹಾಸವನ್ನು ಪರಿಶೀಲಿಸಲಾಗಿ, ಮಾಪಕ ಓದುಗರು ಸದರಿ ಸ್ಥಾವರದ ಮಾಪಕ ಓದುವಿಕೆಯಲ್ಲಿ ಸ್ಥಾವರವು Idle ಎಂದು ಬಹಳಷ್ಟು ವರ್ಷಗಳು ನಮೂದಿಸಿದ್ದು, ವಿದ್ಯುತ್ ಬಳಕೆ **'0'** ಇರುತ್ತದೆ. ಆದ್ದರಿಂದ ಸದರಿ ಗ್ರಾಹಕರಿಗೆ ನಿಯಮಬಾಹಿರವಾಗಿ ಆಕರಿಸಿರುವ ಬಿ.ಎಂ.ದಂಡದ ಮೊತ್ತವನ್ನು ಹಿಂಪಾವತಿಸುವಂತೆ ಹಾಗೂ ಸದರಿ ಬಿ.ಎಂ. ದಂಡ ಎಂದು ಪಾವತಿಸಿಕೊಂಡ ಮೊತ್ತವನ್ನು KERC Conditions of Supply Clause 29-08 and Sub Section 62(6) of the Electricity Act from the date of payment and up to the date of credit ರ ಪ್ರಕಾರ ಬ್ಯಾಂಕ್ ಬಡ್ಡಿದರದೊಂದಿಗೆ ಹಿಂಪಾವತಿಸಿಕೊಡವಂತೆ ಕೋರಿ, ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ದಿನಾಂಕ:16-09-2022 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡುಬರುತ್ತದೆ.

......4

2. ಶ್ರೀ ಶರಶ್ಚಂದ್ರ ಎಂ ಶೆಟ್ಟಿ, ಸ್ಟೇಷನ್ ರೋಡ, ಹುಬ್ಬಳ್ಳಿ ಇವರ ಸ್ಥಾವರ 2 ಕಿ.ವ್ಯಾ. ವಿದ್ಯುತ್ ಭಾರದೊಂದಿಗೆ ಎಲ್.ಟಿ-3 ಜಕಾತಿಯಡಿಯಲ್ಲಿ ದಿನಾಂಕ:10-02-1987 ರಂದು ವಿದ್ಯುತ್ ಸಂಪರ್ಕಿತಗೊಂಡಿದ್ದು, ಸದರಿ ಸ್ಥಾವರಕ್ಕೆ ಅಕ್ಟೋಬರ್-2018 ರಲ್ಲಿ ಮಾಪಕ ತಪಾಸಣೆ ಮಾಡಿ, ಮಂಜೂರಾತಿ ಭಾರಕ್ಕಿಂತ 3 ಕಿ.ವ್ಯಾ ಹೆಚ್ಚಿಗೆ ಲೋಡನ್ನು ಬಳಸುತ್ತಿರುವುದಕ್ಕೆ ಪ್ರತಿ ತಿಂಗಳು ಬಿ.ಎಂ.ಡಿ. ದಂಡವನ್ನು ಆಕರಿಸಿರುವುದು ಕಂಡು ಬರುತ್ತದೆ. ಸದರಿ ಸ್ಥಾವರಕ್ಕೆ ಹೆಚ್ಚುವರಿ ಲೋಡನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಗ್ರಾಹಕರು ಸಲ್ಲಿಸಿರುವುದಿಲ್ಲ. ಹಾಗೂ ಪ್ರತಿ ತಿಂಗಳು ಬಿಲ್ಲಿನಲ್ಲಿ ಬಿ.ಎಂ.ಡಿ. ದಂಡ ಬಂದರು ಸಹಿತ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇಲ್ಲಿಯವರೆಗೂ ಸದರಿ ದಂಡದ ಮೊತ್ತವನ್ನು ಪ್ರತಿ ತಿಂಗಳು ಗ್ರಾಹಕರು ಪಾವತಿಸಿರುವುದು ಕಂಡು ಬರುತ್ತದೆ. ಆದ್ದರಿಂದ ಸದರಿ ಹೆಚ್ಚುವರಿ ಲೋಡನ್ನು ಸಕ್ರಮಗೊಳಿಸಿಕೊಂಡಿರುವುದಕ್ಕೆ ಯಾವುದೇ ದಾಖಲಾತಿಗಳಲ್ಲಿ ಸಲ್ಲಿಸದೇ ಇರುವುದರಿಂದ ಈಗಾಗಲೇ ಪಾವತಿಸಿದ ಬಿ.ಎಂ.ಡಿ. ದಂಡದ ಮೊತ್ತವನ್ನು ಹಿಂಪಾವತಿಸುವ ಪ್ರಮೆಯವೇ ಬರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2 ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಲೈಸನ್ಸುದಾರರು ವೇದಿಕೆಗೆ ಹಾಜರುಪಡಿಸಿರುವ **Oracle Utilities Customer Care and Billing Report**ನಲ್ಲಿ ಮಂಜೂರಾದ ವಿದ್ಯುತ್ ಭಾರ 2 ಕಿ.ವ್ಯಾ. ಇದ್ದು, ದಿನಾಂಕ:06-10-2012 ರಲ್ಲಿ ಸ್ಥಾವರದ **Rated Load 3** ಕಿ.ವ್ಯಾ. ಎಂದು ಇರುತ್ತದೆ. ಆದ್ದರಿಂದ ಗ್ರಾಹಕರು ಮಂಜೂರಾದ ವಿದ್ಯುತ್ ಭಾರಕ್ಕಿಂತ ಅನಧಿಕೃತವಾಗಿ ಹೆಚ್ಚುವರಿ ವಿದ್ಯುತ್ ಬಳಕೆ ಮಾಡಿಕೊಂಡಿರುವುದು ಕಂಡುಬಂದಿದ್ದು, ಸದರಿ ಅನಧಿಕೃತ ಹೆಚ್ಚುವರಿ ಲೋಡನ್ನು ಬಳಸಿರುವುದಕ್ಕೆ ಲೈಸನ್ಸುದಾರರು **KERC COS Regulations 42.01** ರಿಂದ **42.05** ರ ಪ್ರಕಾರ ಆಕರಿಸಿರುವ ದಂಡದ ಮೊತ್ತವನ್ನು ಗ್ರಾಹಕರಿಂದ ಆಕರಿಸಿರುವುದು ಸರಿ ಇರುತ್ತದೆ. ಆಕರಿಸಿರುವ ಬಿ.ಎಂ.ಡಿ. ದಂಡದ ಮೊತ್ತವನ್ನು ಗ್ರಾಹಕರು 2012 ನೇ ಸಾಲಿನಿಂದ ಯಾವುದೇ ಆಕ್ಷೇಪಣೆ ಇಲ್ಲದೆ ನಿಗಮಕ್ಕೆ ಪಾವತಿಸಿತ್ತಾ ಬಂದಿದ್ದಿರುತ್ತದೆ ಮತ್ತು ಅನಧಿಕೃತ ಹೆಚ್ಚುವರಿ ವಿದ್ಯುತ್ ಲೋಡನ ಬಳಕೆಯನ್ನು ಗ್ರಾಹಕರು ಸಕ್ರಮಗೊಳಿಸಿಕೊಂಡಿರುವುಕ್ಕೆ ಯಾವುದೇ ದಾಖಲೆಗಳನ್ನು ವೇದಿಕೆಗೆ ದೂರುದಾರರು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಈ ಕೆಳಗಿನಂತೆ ಆದೇಶ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-266/2022**KYS-1058 **ದಿನಾಂಕ:** 29 DEC 2022

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ: ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ:06-07-2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ಸಿವೈಎಸ್-5493 ದಿ.12.03.2020 ಮತ್ತು HESCOM/DF/CA/DCA/AO(RA)/2021-22/CYS-6004 Date:18-02-2022 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.

**(ರೇವಣಸಿದ್ದಪ್ಪ ಗವಣ್ಣವರ)**
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

**(ಶ್ರೀಮತಿಲೀಲಾ ಆರ್ ಹಿರೇಮಠ)**
ಆಯೋಗದಿಂದ ನಿಯೋಜಿಸಲಾ
ಸದಸ್ಯರು.

**(ಶ್ರೀಮತಿ ಶರಣಮ್ಮ ಎಸ್ ಜಂಗಿನ)**
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವಲಯ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

ಶ್ರೀ ಶರಶ್ಚಂದ್ರ ಎಂ ಶೆಟ್ಟಿ,
[R.R. No :64176C]
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ,
ಕೆಶ್ವಾಪೂರ ಹುಬ್ಬಳ್ಳಿ-580023.

**"ನೊಂದಣೆ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ.

......5